<u>ಗೌರಿಬಿದನೂರು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯದಲ್ಲಿ</u>

ಸಿ.ಸಿ. **950/2017**

ಪಿ.ಡಬ್ಲ್ಯೂ-**6**

ಸಿ.ಡಬ್ಲ್ಯೂ-**7**

ಸಾಕ್ಷಿದಾರರ ಹೆಸರು ಃ ಅವಿನಾಶ್ ವಿ.

ತಂದೆ ಹೆಸರು ಃ ವೀರಹನುಮಂತಪ್ಪ

ವಯಸ್ಸು ಃ **44** ವರ್ಷ

ಕೆಲಸ ಃ **PI Tumkur**

ವಾಸ ಸ್ಥಳ ಃ ತುಮಕೂರು

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ **28-04-2026**

<u>ಮುಖ್ಯ ವಿಚಾರಣೆಃ ಶ್ರೀ ಎ.ಪಿ.ಪಿ. ವಕೀಲರಿಂದಃ</u>

ದಿನಾಂಕಃ 07.05.2015 ರಿಂದ 01.06.2020 ರ ವರೆಗೆ ಗೌರಿಬಿದನೂರು ಗ್ರಾಮಾಂತರ ಠಾಣೆ ಯಲ್ಲಿ ಉಪ-ನಿರೀಕ್ಷಕನಾಗಿ ಕಾರ್ಯನಿರ್ವಹಿಸುತ್ತಿದೆ.

ದಿಃ 28.08.2017 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಬಾತ್ಮಿದಾರರಿಂದ ಮಾಹಿತಿ ಬಂದಿದ್ದು, ಗೌರಿಬಿದನೂರು ತಾಲ್ಲೂಕಿನ ಕಸಬಾ ಹೋಬಿ, ಕುಡುಮಲಕುಂಟೆ ಗ್ರಾಮದಲ್ಲಿ ಯಾರೋ ಒಬ್ಬ ಆಸಾಮಿ ಅಕ್ರಮವಾಗಿ ಮದ್ಯದ ಪ್ಯಾಕೇಟ್ ಗಳನ್ನು ದಾಸ್ತಾನು ಮಾಡಿಕೊಂಡು ಅಕ್ರಮವಾಗಿ ಮಾರಾಟ ಮಾಡುತ್ತಿರುವುದಾಗಿ ಬಂದ ಮಾಹಿತಿ ಮೇರೆಗೆ ನಾನು ಹಾಗೂ ಚಾಸಾ-3 ಮತ್ತು 4 ರವರೊಂದಿಗೆ ಪೊಲೀಸ್ ಜೀಪಿನಲ್ಲಿ ಕುಡುಮಲಕುಂಟೆ ಗ್ರಾಮಕ್ಕೆ ಹೋಗಿ ಪಂಚಾಯಿತಿದಾರರಾದ ಚಾಸಾ-1 ಮತ್ತು 2 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ, ಮರೆಯಲ್ಲಿ ನಿಂತು ನೋಡಲಾಗಿ ಯಾರೋ ಒಬ್ಬ ಆಸಾಮಿ ಚೀಲರೆ ಅಂಗಡಿಯ ಮುಂದೆ ಪ್ಲಾಸ್ಟಿಕ್ ಚೀಲವನ್ನು ಇಟ್ಟುಕೊಂಡು ಅದರಿಂದ ಮದ್ಯದ ಪ್ಯಾಕೇಟ್ ಗಳನ್ನು ತೆಗೆದು ಮಾರಾಟ ಮಾಡುತ್ತಿದ್ದ ವ್ಯಕ್ತಿಯ ಮೇಲೆ ನಾನು ಹಾಗೂ ನನ್ನ ಸಿಬ್ಬಂದಿಗಳು ಧಾಳಿ ನಡೆಸಿ ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ, ನರಸಿಂಹಪ್ಪ ಬಿನ್. ದಿ. ನಂಜಪ್ಪ ಎಂದು

ತಿಳಿಸಲಾಗಿ, ಆತನಿಂದ ಒಂದು ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ, 90 ml Hawyards cheers whisky 48 ಟೆಟ್ರಾ ಪ್ಯಾಕ್ ಗಳು ಇದ್ದು ಸದರಿ ಎಲ್ಲಾ ಪ್ಯಾಕೇಟ್ ಗಳನ್ನು ಪರಿಶೀಲಿಸಲಾಗಿ ಬ್ಯಾಚ್ ನಂ. 206 ಗೆ ಸಂಬಂಧಪಟ್ಟಿರುತ್ತದೆ. ಸದರಿ ಆಸಾಮಿಯನ್ನು ಪರವಾನಿಗೆಯ ಬಗ್ಗೆ ವಿಚಾರಿಸಿದಾಗ ಯಾವುದೇ ಪರವಾನಿಗೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಎಲ್ಲಾ ಮದ್ಯದ ಪ್ಯಾಕೇಟ್ ಗಳನ್ನು ರಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುತ್ತೇವೆ. ಸದರಿ ಟೆಟ್ರಾ ಪ್ಯಾಕ್ ಗಳನ್ನು **'Y'** ಎಂಬ ಸೀಲವನ್ನು ಮಾಡಲಾಗಿತ್ತು. ಸದರಿ ಆರೋಪಿಯನ್ನು ದಸ್ತಗಿರಿ ಮಾಡಿ 3.30 ಗಂಟೆಯಿಂದ 4.30 ರ ವರೆಗೆ ಪಂಚನಾಮೆಯನ್ನು ಜರುಗಿಸಿದೆವು. ನಂತರ ಠಾಣೆಗೆ 5.30 ಕ್ಕೆ ಹಿಂತಿರುಗಿ ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲಿಸಿರುತ್ತೇನೆ.

ನಂತರ ಆರೋಪಿಯನ್ನು ವಿಚಾರಣೆ ಮಾಡಿ, ಸೂಕ್ತ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಸದರಿ ಮಾಲುಗಳನ್ನು ಮಾಲುಪಟ್ಟಿಯಲ್ಲಿ ಸೇರಿಸಿರುತ್ತೇನೆ.

ದಿಃ 28.02.2017 ರಂದು ಚಾಸಾ-1 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 01.03.2017 ರಂದು ಚಾಸಾ-6 ರವರಿಂದ ನಿಪಿ-4 ಅನ್ನು ಪಡೆದುಕೊಂಡಿರುತ್ತೇನೆ. ದಿಃ 16.05.2017 ರಂದು ಚಾಸಾ-5 ರವರ ಮುಖಾಂತರ ಮಾಲುಗಳನ್ನು ರಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ. ಸದರಿ ಚಾಸಾ-5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 01.11.2017 ರಂದು ವರದಿಯನ್ನು ಕಳುಹಿಸಿರುತ್ತೇನೆ. ಈ ಪ್ರಕರಣದ ದೋಷರೋಪಣ ಪಟ್ಟಿಯನ್ನು ಸಲ್ಲಿಸುವ ಸಮಯದಲ್ಲಿ ಕಲಂ. 16 ರಲ್ಲಿ FSL ವರದಿಯು pending ಇಟ್ಟು ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸಾಕ್ಷಿಯು ಆರೋಪಿ ಹಾಗೂ ಮುದ್ದೇ ಮಾಲನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ . ಹೆಚ್.ಎಲ್.ವಿ. ಆರೋಪಿ ಪರ ವಕೀಲರಿಂದಃ</u>

ಆರೋಪಿಯನ್ನು ದಸ್ತಗಿರಿ ಮಾಡುವ ಸಮಯದಲ್ಲಿ arrest card ಹಾಗೂ ಸಂಬಂಧಿಕರಿಗೆ ತಿಳುವಳಿಕೆ ಪತ್ರ ನೀಡಬೇಕು ಎಂದರೆ ಸಾಕ್ಷಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. Arrest Card

ಪ್ರಕರಣದ ಕಡತದಲ್ಲಿ ಇದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ Arrest card ನ್ನು ತೋರಿಸಲಾಗಿ, ಅದನ್ನು ನಿಡಿ-**1** ಎಂದು ಗುರುತಿಸಲಾಯಿತು. ಅದೇ ರೀತಿ ಸಂಬಂಧಿಕರಿಗೆ ನೀಡಿದ ತಿಳುವಳಿಕೆ ಪತ್ರವನ್ನು ತೋರಿಸಲಾಗಿ, ಸಾಕ್ಷಿ ಗುರುತಿಸಿದ್ದು ಅದನ್ನು ನಿಡಿ-**2** ಎಂದು ಗುರುತಿಸಲಾಯಿತು. ನಿಡಿ-1 ರ ಪ್ರಕಾರ ಆರೋಪಿಯನ್ನು ಯಾವ ಸಮಯದಲ್ಲಿ ದಸ್ತಗಿರಿ ಮಾಡಿದ್ದೀರಿ ಎಂದರೆ ದಿಃ 28.02.2017 ರಂದು ಮಧ್ಯಾಹ್ನ 3.30 ಸಮಯದಲ್ಲಿ ಕುಡುಮಲಕುಂಟೆ ಗ್ರಾಮದಲ್ಲಿ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನಾನು ದೂರುದಾರರು ಎಂದರೆ ಸರಿ. ಈ ಪ್ರಕರಣದಲ್ಲಿ ಅಂತಿಮ ವರದಿಯನ್ನು ನಾನೇ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಪಿ-1 ಅನ್ನು ನಾನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುವ ಆರೋಪ, ಆರೋಪಿ ಮಾಡಿಲ್ಲವೆಂದರೆ ಸರಿಯಲ್ಲ. ದೂರನ್ನು ನಾನು ಸಲ್ಲಿಸಿಲ್ಲವೆಂದರೆ ಸರಿಯಲ್ಲ. ಅದೇ ರೀತಿ ದುರಾನ್ನು ಅನುಸರಿಸಿ ಯಾವುದೇ ಪ್ರ.ವ. ವರದಿಯನ್ನು ಸಲ್ಲಿಸಿಲ್ಲವೆಂದರೆ ಸರಿಯಲ್ಲ. ಯಾವ ಸಮಯದಲ್ಲಿ ಪ್ರ.ವ. ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸಂಜೆ 6.00 ಗಂಟೆ ಎಂದು ನುಡಿಯುತ್ತಾರೆ. ನಿಪಿ-1 ತಯಾರು ಮಾಡುವ ಸಮಯದಲ್ಲಿ ಪ್ರ.ವ. ವರದಿಯು ದಾಖಲು ಮಾಡಿಲ್ಲವೆಂದರೆ ಸರಿ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. FSL ವರದಿ ಫಲಿತಾಂಶ ಬರದೇ ಇದ್ದರೂ ಸಹಾ ದೋಷರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ದೋಷಾರೋಪಣ ಪಟ್ಟಿಯನ್ನು ಕಾಲಮಿತಿಯಲ್ಲಿ ಸಲ್ಲಿಸಬೇಕು ಎಂದು ಕಲಂ.16 ರಲ್ಲಿ ನಮೂದು ಮಾಡಿ ಬಾಕಿ ಇದೆ ಎಂದು ಹೇಳಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

ತೆ. ನ್ಯಾಸಾ.ಹೇ. ನನ್ನ ಉ.ಬೆ.ಮಾಡಲಾಯಿತು ಓಹೇ.ಕೇ.ಸ. ಇದೆ ಎಂದು ಒಪ್ಪಿರುತ್ತಾರೆ

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಗೌರಿಬಿದನೂರು